ಓಎಸ್ 329/2023

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 03.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 2 ಮತ್ತು 3ನೇ ಪ್ರತಿವಾದಿಗಳ ಪರ ವಕೀಲರಿಂದ**

ಮೃತ ಗುರುಲಿಂಗಪ್ಪ ಮತ್ತು 1ನೇ ಪ್ರತಿವಾದಿ ಗೌರಮ್ಮ ರವರಿಗೆ ಗುರುಪಾದಪ್ಪ ಎಂಬುವವರು ಒಬ್ಬನೇ ಮಗ ಎಂದರೆ ಸಾಕ್ಷಿಯು ಇಲ್ಲ ಸುಬ್ಬಮ್ಮ ಆದ ನಾನು ಮತ್ತು ಗುರುಪಾದಪ್ಪ ರವರು ಗುರುಲಿಂಗಪ್ಪ ಮತ್ತು 1ನೇ ಪ್ರತಿವಾದಿಯ ಮಕ್ಕಳಾಗಿರುತ್ತೇವೆ ಎಂದು ನುಡಿಯುತ್ತಾರೆ. ಮೃತ ಗುರುಪಾದಪ್ಪ ರವರಿಗೆ 2 ಮತ್ತು 3ನೇ ಪ್ರತಿವಾದಿಗಳು ಮಕ್ಕಳು ಎಂದರೆ ಸರಿ. ಗುರುಲಿಂಗಪ್ಪ ರವರ ಜೀವಿತಾವಧಿಯಲ್ಲಿ ದಾವ ಆಸ್ತಿಗಳನ್ನು ಅವರೇ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಗುರುಲಿಂಗಪ್ಪ ರವರು ಮೃತಪಟ್ಟ ನಂತರ ಗುರುಪಾದಪ್ಪ ರವರು ಮಾತ್ರ ದಾವ ಆಸ್ತಿಗಳನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಾನು ಮತ್ತು ಗುರುಪಾದಪ್ಪ ಇಬ್ಬರೂ ಉಳುಮೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಗುರುಪಾದಪ್ಪ ರವರು ಮೃತ ಪಟ್ಟ ನಂತರ ಅವರ ಹೆಂಡತಿ ಮಕ್ಕಳು ದಾವ ಆಸ್ತಿಗಳನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ನಾನು ಕೂಡ ಉಳುಮೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಮತ್ತು ಪ್ರತಿವಾದಿಗಳು ಒಂದೇ ಕುಟುಂಬದಲ್ಲಿ ವಾಸವಿದ್ದೇವೆ ಎಂದು ದಾಖಲೆಯನ್ನು ಹಾಜರಪಡಿಸಿದ್ದೇನೆ. ನಾನು ದಾವ ಆಸ್ತಿಯಲ್ಲಿ ಬೇಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳ ಮೇಲೆ ಒಟ್ಟಾಗಿ ವ್ಯವಹಾರ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜಪಡಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ನನ್ನ ವಾದ ಪತ್ರದಲ್ಲಿ ಪ್ರತಿವಾದಿಗಳು ದಾವ ಆಸ್ತಿಗಳನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ವಾದ ಪತ್ರದಲ್ಲಿ ತಿಳಿಸಿದ್ದು ಸದರಿ ವಿಚಾರಗಳು ನನಗೆ ಕಳೆದ 3 ವರ್ಷಗಳ ಹಿಂದೆ ತಿಳಿದಿರುತ್ತದೆ. ನನಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸಧಸ್ಯರಲ್ಲ ಎಂದರೆ ಸರಿಯಲ್ಲ.

ಓಎಸ್ 329/2023

ಪಿಡಬ್ಲ್ಯೂ 1

ದಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸಾಕ್ಷಿಯು ನನ್ನ ತಾತನಿಗೆ ಸೇರಿದ್ದು ಎಂದು ನುಡಿಯುತ್ತಾರೆ. ದಾವ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳನ್ನು ಕಬಳಿಸುವ ಸಲುವಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ